


**ಬಯಲರಸಿ ಹೊರಟವಳು**
ಕಥಾಸಂಕಲನ
ಲೇ: ಛಾಯಾ ಭಟ್
ಪು: 128 ಬೆ: . 120
ಪ್ರ: ಛಂದ ಪುಸ್ತಕ
ಐ–004, ಮಂತ್ರಿ ಪ್ಯಾರಡೈಸ್,
ಬನ್ನೇರುಘಟ್ಟ ರಸ್ತೆ,
ಬೆಂಗಳೂರು –560 076

**‘ನನ್ನ ಓದು’ ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಕನ್ನಡ ಪುಸ್ತಕಗಳ ಕುರಿತ ಅವಲೋಕನವನ್ನು ಇಲ್ಲಿ ಕೊಡಲಾಗುತ್ತದೆ.**

ಮದುವೆಯಾಗಲು ಹೊರಟಿರುವ ಶಾರಿಗೆ ಒಂದು ತೆಳ್ಳನೆಯ ಹೊಟ್ಟೆಯನ್ನು ಕೂಡ ಕೊಡುವುದಿಲ್ಲ ಅವರು. ಅವಳ ‘ಏಳು ತಿಂಗಳ ಬಸುರಿ ಹೊಟ್ಟೆ’ಯನ್ನು ಆಡಿಕೊಂಡೇ ಅವಳನ್ನು ಹೊಸಬದುಕಿಗೆ ಸಜ್ಜಾಗಿಸುವ ಸವಾಲು ಅವರೇಕೆ ಕೈಗೆತ್ತಿಕೊಳ್ಳುತ್ತಿದ್ದಾರೆ ಎನ್ನುವುದನ್ನು ನಮ್ಮ ಸ್ತ್ರೀವಾದಿಗಳು ಗಮನವಿಟ್ಟು ನೋಡುವ ಅಗತ್ಯವಿದೆ. ಹಾಗೆಯೇ ಊರವರ ಕಣ್ಣಲ್ಲಿ ‘ಅಮ್ಮ’ ಆಗಿಬಿಟ್ಟಿರುವ ಪಾತಿಚಿಕ್ಕಿಯ ಬಾಯಲ್ಲಿ ಬರುವ ದುರ್ನಾತದ ತೇಗನ್ನು ಓದುತ್ತ ಓದುಗರೂ ಮೂಗು ಮುಚ್ಚಿಕೊಳ್ಳುವಂತೆ ಮಾಡುವುದನ್ನೂ ಗಮನಿಸಬೇಕು. ಶಿವರಾಮ ಕಾರಂತರು ಒಂದೆಡೆ ‘‘ಒಂದು ಹೆಣ್ಣನ್ನು ಮದುವೆಯಾಗುವುದೆಂದರೆ ಅವಳ ವಾಸನೆಯನ್ನು ಕೂಡಾ ಒಪ್ಪಿಕೊಳ್ಳುವುದೆಂದು ಅರ್ಥ’’ ಎಂದಿದ್ದರು. ವಾಸನೆ ಎಂದರೆ ಅದರ ಎರಡೂ ಬಗೆ ಸೇರಿದಂತೆ ಹಲವು ಅರ್ಥಗಳಿವೆ. ಮಾತ್ರವಲ್ಲ, ವಾಸನೆ ಎಂಬುದು ಹೆಣ್ಣಿಗೆ ಮಾತ್ರ ಸಂಬಂಧಿಸಿದ್ದಲ್ಲ. ಎಲ್ಲಕ್ಕಿಂತ ಮುಖ್ಯವಾದದ್ದು, ಈ ವಾಸನೆಯೇ ಮನುಷ್ಯನನ್ನು ಮನುಷ್ಯನನ್ನಾಗಿ ಕಾಣಲು, ಒಪ್ಪಿಕೊಳ್ಳಲು ಬೇಕಾದ ಕಣ್ಣು ಕೊಡುವಂಥದ್ದು ಎಂಬ ಮಾತು.

ದೈನಂದಿನ ಕ್ಷುದ್ರತೆಯನ್ನು ಎತ್ತಿ ಆಡುವುದು ಓದುಗನಿಗೆ ಅಷ್ಟೇನೂ ಆಪ್ಯಾಯಮಾನ ಅನುಭವವನ್ನು ಕೊಡುವುದಿಲ್ಲ. ದೈನಂದಿನ ಕ್ಷುದ್ರತೆಯನ್ನು ಕುರಿತು ವ್ಯಂಗ್ಯವಾಡುವ, ಟೀಕಿಸುವ, ಅದನ್ನು ತಾನು ಗುರುತಿಸುತ್ತಿದ್ದೇನೆ ಎಂಬ ನೆಲೆಯ ಧ್ವನಿಯಲ್ಲಿ ಮಾತನಾಡತೊಡಗಿದಂತೆಲ್ಲ ಕತೆಗಾರ ಮತ್ತು ಓದುಗನ ಸಂಬಂಧದಲ್ಲಿ ಒಂದು ವಿಚಿತ್ರ ಅಂತರ ಕೂಡ ಬೆಳೆಯತೊಡಗುತ್ತದೆ. ತುಂಬ ಆಪ್ತವಾದ